

ಮುಖ್ಯ ಸಭಾಂಗಣದಲ್ಲಿರುವ ಮಂದಸ್ಮಿತ ಬುದ್ಧನ ಮೂರ್ತಿ



ಸುಮಾರು ಐದುನೂರು ವರ್ಷಗಳಷ್ಟು ಹಳೆಯದಾದ ಅರಳಿಮರಕ್ಕೆ ಕಟ್ಟಿಗೆಯ ಆಸರೆ

ಅಚ್ಚುಮೆಚ್ಚಿನ ಪಿಕ್ನಿಕ್ ಸ್ಪಾಟ್. ಚಾಂಗ್ ಮಾಯ್– ಲಂಪಾಂಗ್ ರಾಷ್ಟ್ರೀಯ ಹೆದ್ದಾರಿಯಲ್ಲಿ ನಗರದ ವಾಯವ್ಯ ದಿಕ್ಕಿನಲ್ಲಿ ಈ ಮಂದಿರ ವಿಶಾಲವಾಗಿ ವ್ಯಾಪಿಸಿದೆ. ಮಹಾನಗರದ ಯಾವುದೇ ಮೂಲೆಯಿಂದಲೂ 'ಟುಕ್ ಟುಕ್' (ಆಟೊ ರಿಕ್ಷಾ) ಅಥವಾ ಬೈಕ್ ಟ್ಯಾಕ್ಸಿ ಮೂಲಕ ಸುಲಭವಾಗಿ ಈ ಸ್ಥಳ ತಲುಪಬಹುದು. ಉತ್ತರ ಥಾಯ್ಲೆಂಡಿನ ಅತಿ ದೊಡ್ಡ ನಗರ ಎಂಬ ಹೆಗ್ಗಳಿಕೆ ಪಡೆದಿರುವ ಚಾಂಗ್ ಮಾಯ್, ಸುಖಲೋಲುಪತೆ ಹಾಗೂ ಪ್ರಾಚೀನ ಪರಂಪರೆ – ಎರಡಕ್ಕೂ ಸಾಕ್ಷಿಯಾದ ಪಟ್ಟಣವೆಂಬ ಖ್ಯಾತಿ ಗಳಿಸಿದೆ!

ಹದಿನೈದನೇ ಶತಮಾನದ ಮಧ್ಯಭಾಗದಲ್ಲಿ ಲನ್ ನಾ ಸಾಮ್ರಾಜ್ಯದ ಅರಸು ತಿಲೋಕರಥ ಥಾಯ್ಲೆಂಡನ್ನು ಆಳುತ್ತಿದ್ದ. ರಾಜಧಾನಿ ಚಾಂಗ್ ಮಾಯ್‌ನಲ್ಲಿ ಆಯೋಜಿತವಾಗಿದ್ದ ಎಂಟನೇ ವಿಶ್ವ ಬೌದ್ಧ ಸಮ್ಮೇಳನದ ಆತಿಥ್ಯವನ್ನು ಈ ರಾಜ ವಹಿಸಿಕೊಂಡಿದ್ದ. ಅದರ ಸ್ಮರಣೆಗಾಗಿ ಬೌದ್ಧ ಕ್ಷೇತ್ರವೊಂದನ್ನು ನಿರ್ಮಿಸುವ ಆಸೆ ಆತನದು. ಈ ನಿಟ್ಟಿನಲ್ಲಿ ಮಂದಿರ ಕಟ್ಟಲು ಯೋಜನೆಯೊಂದನ್ನು ರೂಪಿಸಿದ ತಿಲೋಕರಥ, ಆ ಕುರಿತು ಮಾಹಿತಿ ಪಡೆದುಕೊಂಡು ಬರಲು ಒಂದಷ್ಟು ಬೌದ್ಧ ಬಿಕ್ಕುಗಳನ್ನು ಬರ್ಮಾಕ್ಕೆ ಕಳಿಸಿದ್ದ. ಅವರು ಅಲ್ಲಿನ ಮಹಾಬೋಧಿ ಮಂದಿರವನ್ನು ಸಂದರ್ಶಿಸಿ, ಅದರ ವಿನ್ಯಾಸ ಹಾಗೂ ನಿರ್ಮಾಣ ಕೌಶಲದ ಮಾಹಿತಿ ಪಡೆದುಕೊಂಡರು. ಆ ದೇಗುಲವೋ, ಬೋಧಗಯಾದಲ್ಲಿನ (ಈಗಿನ ಬಿಹಾರದ) ಮಹಾಬೋಧಿ ಮಂದಿರದ ಪ್ರತಿಕೃತಿ ಆಗಿತ್ತು. ಬೋಧಗಯಾದಲ್ಲಿಯೇ ಗೌತಮನಿಗೆ ಜ್ಞಾನೋದಯ ಆಗಿದ್ದು.

ಬೌದ್ಧ ಬಿಕ್ಕುಗಳ ಮಾರ್ಗದರ್ಶನದ ಆಧಾರದ ಮೇಲೆ ದೇಗುಲವನ್ನು ವಿನ್ಯಾಸ ಮಾಡಿ, ಕ್ರಿ.ಶ.1455ರಲ್ಲಿ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು. ಶ್ರೀಲಂಕಾಕ್ಕೆ ಭೇಟಿ ನೀಡಿ ವಾಪಸಾಗಿದ್ದ ಬೌದ್ಧ ಸನ್ಯಾಸಿಯೊಬ್ಬ, ತನ್ನ ಜೊತೆ ಅಲ್ಲಿಂದ ಅರಳಿ ವೃಕ್ಷದ ಸಸಿಯೊಂದನ್ನು ತಂದಿದ್ದ ಹಾಗೂ ಆ ವೃಕ್ಷದ ಮೂಲ ಬೋಧಗಯಾದಲ್ಲಿ ಗೌತಮ ತಪಸ್ಸು ಮಾಡಿ ಜ್ಞಾನೋದಯ ಪಡೆದ ತಾಣದ ಅರಳಿಮರವೇ ಆಗಿತ್ತು! ಮಂದಿರದ ನಿರ್ಮಾಣ ಶುರು ಮಾಡಿದ ದಿನದಂದು ರಾಜ ತಿಲೋಕರಥನು ಆ ಅರಳಿ ಸಸಿ ನೆಟ್ಟ. ಬೌದ್ಧ ಧರ್ಮ ಉದಯವಾಗಿ 2000 ವರ್ಷಗಳು ಪೂರ್ಣಗೊಂಡ ಸ್ಮರಣೆಯಲ್ಲಿ ನಡೆದ ವಿಶ್ವ ಬೌದ್ಧ ಸಮ್ಮೇಳನದ ನೆನಪಿಗಾಗಿ ಕ್ರಿ.ಶ.1476ರಲ್ಲಿ ಈ ಕ್ಷೇತ್ರವನ್ನು ಲೋಕಾರ್ಪಣೆ ಮಾಡಲಾಯಿತು. ಸಮ್ಮೇಳನದ ಬಗ್ಗೆ ಹೆಚ್ಚು ಮಾಹಿತಿ ಸಿಗದೇ ಹೋದರೂ, ಈ ದೇಗುಲ ಮಾತ್ರ ಗಟ್ಟಿಯಾಗಿ ನೆಲೆ ನಿಂತಿತು.

### ಹೆಜ್ಜೆಹೆಜ್ಜೆಗೂ ಬುದ್ಧನ ಕಥೆ

ಬೋಧಗಯಾದಲ್ಲಿರುವ ಮಹಾಬೋಧಿ ದೇಗುಲದ ಛಾಯೆ ಈ ದೇವಸ್ಥಾನದ ಮೇಲೆ ದಟ್ಟವಾಗಿದೆ. 'ವಾತ್ ಚೆದ್ ಯಾತ್' ಅಂದರೆ ಏಳು ಸ್ತೂಪಗಳ ಕ್ಷೇತ್ರ ಎಂದರ್ಥ. ಆವರಣದ ಒಳಭಾಗದಲ್ಲಿ ಸಪ್ತ ಸ್ತೂಪಗಳನ್ನು ಹೊಂದಿರುವ ಈ ದೇಗುಲವು, ಹೆಜ್ಜೆಹೆಜ್ಜೆಯಲ್ಲೂ ಬುದ್ಧನ ಕಥೆಗಳನ್ನು ಹೇಳುತ್ತದೆ.

ಆವರಣ ಪ್ರವೇಶಿಸಿದಾಗ ಮಂದಿರದ ಬೃಹತ್ ರೂಪು ಕಣ್ಣೆದುರು ಮೊದಲಿಗೆ ಅನಾವರಣಗೊಳ್ಳುತ್ತದೆ. ಹೊರಗೋಡೆಗಳ ಮೇಲೆ ಹಲವಾರು ದೇವತೆಗಳ ವಿಗ್ರಹಗಳಿದ್ದರೆ, ಒಳಭಾಗವು ಕಣ್ಮನ ಸೆಳೆಯುವ ಚಿತ್ರಗಳಿಂದ ಅಲಂಕೃತವಾಗಿದೆ. ಮಂದಿರದ ಸುತ್ತಲೂ ದೊಡ್ಡ ಹಾಗೂ ಕಿರು ಪ್ರಮಾಣದ ಸರ್ಪಗಳ ನೂರಾರು ಮೂರ್ತಿಗಳು ಚಕಿತಗೊಳಿಸುತ್ತವೆ. 'ನಮ್ಮ ಸಂಪ್ರದಾಯದಲ್ಲಿ ಹಾವುಗಳನ್ನು ಪ್ರತಿನಿಧಿಸುವ ನಕ್ಷತ್ರ ಒಂದಿದೆ. ಆ ನಕ್ಷತ್ರದಲ್ಲಿ ಜನಿಸಿದವರಿಗೆ ಈ ತಾಣ ಪುಣ್ಯಕ್ಷೇತ್ರ. ಅಂಥವರು ತಮ್ಮ ಜನ್ಮದಿನದಂದು ಇಲ್ಲಿಗೆ ಬಂದು, ಸರ್ಪಗಳ ವಿಗ್ರಹಗಳಿಗೆ ವಿಶೇಷ ಪೂಜೆ ಹಾಗೂ ಉಡುಗೊರೆ ಸಲ್ಲಿಸುತ್ತಾರೆ' ಎಂದು ಚಾಂಗ್ ಮಾಯ್ ನಿವಾಸಿ ನಿಯೋ ವಿವರಣೆ ನೀಡಿದರು.

ಮಂದಿರದ ಪ್ರಮುಖ ಆಕರ್ಷಣೆಯೇ, ಮುಖ್ಯ ಸಭಾಂಗಣ. ಮಹಾದ್ವಾರ ದಾಟಿ ಒಳಬರುತ್ತಿರುವಂತೆ ಸಭಾಂಗಣದ ವಿಶಾಲ ಪ್ರಾಂಗಣ ಹಾಗೂ ಅಲ್ಲಿನ ಪ್ರಶಾಂತ ವಾತಾವರಣ ಗಮನ ಸೆಳೆಯುತ್ತದೆ. ಕಂಬಗಳ ಆಸರೆ ಇಲ್ಲದೇ ನಿರ್ಮಾಣವಾದ ಒಳಾಂಗಣ ಮತ್ತು ಚಾವಣಿಯು ಹರಳುಗಳಿಂದ ಅಲಂಕೃತವಾಗಿವೆ. ಗೋಡೆಗಳ ಮೇಲಿರುವ ಚಿತ್ರಗಳನ್ನು ನೋಡುತ್ತ ಮುಂದೆ ಬಂದಂತೆ, ಎದುರಿನ ಗೋಡೆಯ ಮುಂಬದಿಯಲ್ಲಿ ಸ್ಥಾಪಿಸಲಾದ ಬುದ್ಧನ ಮಂದಸ್ಮಿತ ವಿಗ್ರಹಕ್ಕೆ ಮನ ಸೋಲುತ್ತದೆ. ವಿಗ್ರಹದ ಎಡ ಮತ್ತು ಬಲಭಾಗಕ್ಕೆ ಮೇಣದಿಂದ ಮಾಡಿದ ಬೌದ್ಧ ಸನ್ಯಾಸಿಗಳ ವಿಗ್ರಹಗಳು ಅಚ್ಚರಿಗೊಳಿಸುವಷ್ಟು ಸಹಜವಾಗಿವೆ.

ದೇವಸ್ಥಾನದ ನಿರ್ಮಾಣ ಕಾರ್ಯ ಆರಂಭವಾದಾಗ ಪ್ರಾಂಗಣದ ಹಿಂಭಾಗದಲ್ಲಿ ನೆಟ್ಟಿದ್ದ ಅರಳಿ ಸಸಿಯು ವೃಕ್ಷವಾಗಿ ಹಲವು ಶತಮಾನಗಳ ಕಾಲ ಇಲ್ಲೇ ಇತ್ತಂತೆ. ಮುಂದೆ ದೇಗುಲಕ್ಕೆ ಹಾನಿ ಮಾಡಬಹುದು ಎಂಬ ಆತಂಕದಿಂದಾಗಿ 1910ರಲ್ಲಿ ಅದನ್ನು ಬೇರುಸಮೇತ ಕಿತ್ತು ಹಾಕಲಾಯಿತು. ಆದರೆ, ಮಂದಿರ ನಿರ್ಮಾಣದ ದಿನದಂದು ನೆಟ್ಟಿದ್ದ ಅರಳಿ